# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆಃ 115/2024

**ಸಾಕ್ಷಿಯನ್ನು ದಿಃ 05.08.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಬಿ.ಬಿ ಆಯಿಷಾ | ಸಿಡಬ್ಲ್ಯೂಃ 1 | ಪಿಡಬ್ಲ್ಯೂಃ 1 |
| ಗಂಡನ ಹೆಸರು | ಲೇ ತಾಜುದ್ದೀನ್ | | |
| ವಯಸ್ಸು | 38 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಮುಸ್ಲಿಂ ಬ್ಲಾಕ್, ಹುಣಸೂರು | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಚಾಸಾ–2 ನನ್ನ ತಮ್ಮ. ಚಾಸಾ–3 ನನ್ನ ಚಿಕ್ಕಮ್ಮ. ಚಾಸಾ–4, 6 ಮತ್ತು 7 ಗೊತ್ತು. ಚಾಸಾ–5 ನನ್ನ ತಾಯಿ. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. (3, 4 ಮತ್ತು 7ನೇ ಆರೋಪಿತರು ಗೈರು ಹಾಜರಿದ್ದು, ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ. ಸಾಕ್ಷಿ ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದೂರನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ–2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಿಪಿ–1 ನಾನು ನೀಡಿದ ದೂರಾಗಿದೆ.

ಮುಸ್ಲಿಂಬ್ಲಾಕ್ ನಲ್ಲಿರುವ ಮನೆ ನಂ. 1580ರ ಮನೆ ಇದ್ದ ಜಾಗದಲ್ಲಿ ಹಿಂದೆ ಖಾಲಿ ಜಾಗ ಇದ್ದು, ಆ ಬಗ್ಗೆ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದೆ. ದಿಃ 01.09.2023 ರಂದು ಮಧ್ಯಾಹ್ನ ಸುಮಾರು 3–45 ಗಂಟೆಗೆ ನಾನು, ಚಾಸಾ–2 ಮತ್ತು 3 ರವರು ನಮ್ಮ ಮನೆಯ ಹತ್ತಿರ ಇದ್ದೆವು. ಆಗ 1 ಮತ್ತು 2ನೇ ಆರೋಪಿತರು ಖಾಲಿ ಜಾಗದಲ್ಲಿ ಶೆಡ್ ರಿಪೇರಿ ಮಾಡುತ್ತಿದ್ದರು. ಆಗ ನಾನು ಮತ್ತು ಚಾಸಾ–3 ರವರು ಈ ಜಾಗದಲ್ಲಿ ಏನು ಕೆಲಸ ಮಾಡಬೇಡಿ ಕೇಸು ನಡೆಯುತ್ತಿದೆ ಎಂದು ಹೇಳಿದರು. ಆಗ ಆರೋಪಿತರೆಲ್ಲರೂ ಏಕಾ ಏಕಿ

ಗುಂಪುಕಟ್ಟಿಕೊಂಡು ಬಂದರು. ಅವರೆಲ್ಲರೂ ನನಗೆ ಮತ್ತು ಚಾಸಾ-3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು. ಚಾಸಾ-2 ರವರು ವಿಡಿಯೋ ಮಾಡುತ್ತಿದ್ದಾಗ 3ನೇ ಆರೋಪಿ ಹಿಂದಿನಿಂದ ಬಂದು ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡ. ಆಗ 1ನೇ ಆರೋಪಿಯು ಕಲ್ಲಿನಿಂದ ಚಾಸಾ-2 ರವರ ಬಲಗಣ್ಣಿಗೆ ಹೊಡೆದ. 1 ಮತ್ತು 3ನೇ ಆರೋಪಿತರು ನನ್ನ ನೈಟಿಯನ್ನು ಹಿಡಿದು ಎಳೆದಾಡಿ ನನಗೆ ಕೈಯಿಂದ ಮೈಕೈಗೆ ಹೊಡೆದು ಸೂಳೆಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ರಿಂದ 4ನೇ ಆರೋಪಿತರು ಚಾಸಾ-3 ರವರಿಗೂ ಕೂಡ ಕೈಗಳಿಂದ ಮೈಕೈಗೆ ಹೊಡೆದರು. ಆಗ ನಾನು, ಚಾಸಾ-4 ಮತ್ತು 5 ಮತ್ತು ಸಲೀಮುನ್ನಿಸಾ ರವರು ಜಗಳ ಬಿಡಿಸಿದೆವು. ನಂತರ 1ನೇ ಆರೋಪಿ ನಮ್ಮನ್ನು ಉದ್ದೇಶಿಸಿ ಅಲ್ಲಿಯೇ ಕಲ್ಲನ್ನು ಬಿಸಾಕಿ ಇವತ್ತು ನೀವು ಬಚಾವ್ ಆಗಿದ್ದಿರಾ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು. ಚಾಸಾ-2 ರವರಿಗೆ ಗಾಯಗಳಾಗಿದ್ದ ಕಾರಣ ನಾನು ಅವರನ್ನು ಯಾವುದೋ ಒಂದು ಬೈಕಿನಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಮುಗಾಗಿನಲ್ಲಿ ರಕ್ತ ಬರುತ್ತಿದೆ. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಹೋಗುವಂತೆ ತಿಳಿಸಿದರು ಆದ್ದರಿಂದ ಆ್ಯಂಬುಲೆನ್ಸ್ ನಲ್ಲಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲಿಸಿದೆವು. ಆ ಕಾರಣದಿಂದ ನಾನು ನಿಪಿ-1 ರ ದೂರನ್ನು ಕೊಟ್ಟೆ

ದಿಃ 03.09.2023 ರಂದು ಪೋಲಿಸರು ಘಟನಾ ಸ್ಥಳಕ್ಕೆ ಮಹಜರಿಗೆ ಬಂದಿದ್ದರು. ಆಗ ನಾನು ಹಾಜರಿದ್ದು, ಪೋಲಿಸರಿಗೆ ಸ್ಥಳ ತೋರಿಸಿದ್ದೇನೆ. ಆ ಸಮಯದಲ್ಲಿ ಚಾಸಾ-6 ಮತ್ತು 7 ರವರು ಹಾಜರಿದ್ದರು. ಮಹಜರನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಮಾಡಿದ್ದಾರೆ. ಮಹಜರಿನಲ್ಲಿ ಬರೆದ ವಿಚಾರಗಳು ಗೊತ್ತಿದೆ. ಆ ದಿನ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರು ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಂ.ಆರ್.ಹೆಚ್ ವಕೀಲರಿಂದಃ**

1ನೇ ಆರೋಪಿ ನನ್ನ ತಾಯಿಯ ತಮ್ಮನ ಮಗ. 2ನೇ ಆರೋಪಿನನ್ನ ತಾಯಿಯ ತಮ್ಮನ ಹೆಂಡತಿ. 3ನೇ ಆರೋಪಿ ನನ್ನ ತಾಯಿಯ ಅಣ್ಣನ ಮಗ. 4ನೇ ಆರೋಪಿ ನನ್ನ ತಾಯಿಯ ತಮ್ಮನ ಮಗಳು. 5ನೇ ಆರೋಪಿ ನನ್ನ ತಾಯಿಯ ಅಣ್ಣನ ಮಗ. 6ನೇ ಆರೋಪಿ 2ನೇ

ಆರೋಪಿಯ ತಮ್ಮ. 7ನೇ ಆರೋಪಿ ನನ್ನ ತಾಯಿಯ ಅಣ್ಣನ ಮಗಳು. 4ನೇ ಆರೋಪಿ ಪಿರಿಯಾಪಟ್ಟಣ ತಾಲ್ಲೂಕಿನ ಅಂಕನಹಳ್ಳಿಯ ವಾಸಿ. ಅವರು ಎಷ್ಟು ವರ್ಷಗಳಿಂದ ಅಲ್ಲಿ ವಾಸ ಇದ್ದಾರೆ ಎಂದು ಗೊತ್ತಿಲ್ಲ. ಮದುವೆಯಾದಾಗಿನಿಂದ ಇದ್ದಾರೆ. 7ನೇ ಆರೋಪಿ ಮೈಸೂರಿನಲ್ಲಿ ವಾಸವಿದ್ದಾರೆ. ಮೈಸೂರಿನಲ್ಲಿ ಎಲ್ಲಿ ಎಂದು ಗೊತ್ತಿಲ್ಲ. ದಿಃ 01.09.2023 ರಂದು ಮಧ್ಯಾಹ್ನ 3-45 ಗಂಟೆಗೆ ಘಟನೆ ನಡೆಯಿತು ಎನ್ನುವ ಸ್ಥಳದಲ್ಲಿ ಒಟ್ಟು 7 ಜನ ಇದ್ದರು. ಅವರು ಯಾರೆಂದರೆ ಆರೋಪಿತರು. ಆ ಸಮಯದಲ್ಲಿ ನಾವು ಒಟ್ಟು 6 ಜನ ಇದ್ದೆವು. ನಾನು, ಚಾಸಾ-2 ರಿಂದ 5 ಮತ್ತು ಸಲೀಮುನ್ನಿಸಾ ಇದ್ದೆವು. ಮೇಲೆ ಹೇಳಿದ 13 ಜನರಾದ ನಮ್ಮನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. 1 ಮತ್ತು 2ನೇ ಆರೋಪಿತರು ಶೆಡ್ ನ್ನು ರಿಪೇರಿ ಮಾಡುತ್ತಿದ್ದರು. ಬಾಕಿ 5 ಜನ ಆರೋಪಿತರು ಮತ್ತು ನಾವು 6 ಜನ ಶೆಡ್ ರಿಪೇರಿ ಮಾಡುತ್ತಿದ್ದ ಜಾಗದಲ್ಲಿ ಇದ್ದೆವು. 2ನೇ ಆರೋಪಿ ಮತ್ತು ಅವರ ಮಕ್ಕಳು ಆ ಶೆಡ್ ನಲ್ಲಿ ಸುಮಾರು 10-12 ವರ್ಷಗಳಿಂದ ವಾಸ ಮಾಡುತ್ತಿದ್ದರು. ಅದು ಅವರಿಗೆ ಹೇಗೆ ಬಂತು ಎಂದು ಗೊತ್ತಿದೆ. ಹೇಗೆ ಬಂತು ಎಂದರೆ ನನ್ನ ಅಜ್ಜಿ ಮನೆ ಕಟ್ಟಿಕೊಟ್ಟು ಇರಿ ಎಂದು ಹೇಳಿದ್ದರಿಂದ ವಾಸ ಮಾಡುತ್ತಿದ್ದಾರೆ. ನನ್ನ ಅಜ್ಜಿಯ ಹೆಸರು ಅಜೀಜುನ್ನಿಸಾ. ಅವರು ಈಗ ಬದುಕಿಲ್ಲ. 2019 ರಲ್ಲಿ ತೀರಿಕೊಂಡರು. ನನ್ನ ಅಜ್ಜಿ ಬದುಕಿದ್ದಾಗ 2ನೇ ಆರೋಪಿ ನನ್ನ ಅಜ್ಜಿಯ ವಿರುದ್ಧ ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಃ 218/2013 ದಾಖಲಿಸಿದ ಬಗ್ಗೆ ಗೊತ್ತಿದೆ. ಸದರಿ ದಾವೆಯಲ್ಲಿ ನನ್ನ ಅಜ್ಜಿ ಮತ್ತು ಚಿಕ್ಕಮ್ಮಂದಿರಾದ ಚಾಸಾ-3 ಹಾಗೂ ಸಲೀಮುನ್ನಿಸಾ ರವರು ವಕೀಲರನ್ನು ಇಟ್ಟು ದಾವೆ ನಡೆಸುತ್ತಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಅವರ ಜೊತೆ ನಾನು ಕೂಡ ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದರೆ ಇಲ್ಲ. ಸದರಿ ದಾವೆಯನ್ನು ಯಾವ ಉದ್ದೇಶಕ್ಕಾಗಿ ದಾಖಲಿಸಲಾಗಿತ್ತು ಎಂದು ನನಗೆ ಗೊತ್ತಿದೆ. ನನ್ನ ಅಜ್ಜಿಯ ಆಸ್ತಿಯನ್ನು ಅವರ ಹೆಣ್ಣು ಮಕ್ಕಳಾದ ಚಾಸಾ-3 ಮತ್ತು ಸಲೀಮುನ್ನಿಸಾ ರವರು ಮೋಸದಿಂದ ಖಾತೆ ಮಾಡಿಸಿಕೊಂಡಿದ್ದಾರೆ ಎಂದು 2ನೇ ಆರೋಪಿ ಮೇಲೆ ಹೇಳಿದ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಖಾತೆಯು ಮೋಸದಿಂದ ಆದ ನೋಂದಾಯಿತ ದಾನಪತ್ರದ ಮೂಲಕ ಆದಂತಹ ಖಾತೆ ಎಂದರೆ ಮೋಸದಿಂದ ಆಗಿಲ್ಲ. ನನ್ನ ಅಜ್ಜಿ ತೀರಿಹೋಗುವಾಗ ಅವರಿಗೆ 95 ವರ್ಷ ವಯಸ್ಸಾಗಿತ್ತು. ಅವರು ತನ್ನ ಹೆಣ್ಣುಮಕ್ಕಳಾದ ಚಾಸಾ-3 ಮತ್ತು ಸಲೀಮುನ್ನಿಸಾರವರ

ಸುಫರ್ಧಿಯಲ್ಲಿದ್ದರು. ಚಾಸಾ–3 ಮತ್ತು ಸಲೀಮುನ್ನಿಸಾರವರಿಗೆ ಮದುವೆಯಾಗಿಲ್ಲ. ಅವರಿಬ್ಬರಿಗೆ 45 ಮತ್ತು 40 ವರ್ಷ ವಯಸ್ಸಾಗಿರಬಹುದು. ಮೋಸದಿಂದ ಆದ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂಬ ಬಗ್ಗೆ ದಾವೆ ನಡೆಯುತಿತ್ತು. ಸದರಿ ದಾವೆ 2ನೇ ಆರೋಪಿಯ ಪರವಾಗಿ ಡಿಕ್ರಿಯಾಯಿತು ಎಂದರೆ ಸರಿ. ಸಾಕ್ಷಿ ಮುಂದುವರಿದು ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯು ಇದೇ ನ್ಯಾಯಾಲಯದಲ್ಲಿ 5 ವರ್ಷ ಕಾಲವಿಳಂಬದಿಂದ ಹೂಡಲಾಗಿದೆ ಎಂದು ಆರ್.ಎ –2024 ರಂತೆ ನಡೆಯುತ್ತಿದೆ ಎಂದರೆ ಸರಿ.

ಮೇಲೆ ಹೇಳಿದ ನನ್ನ ಚಿಕ್ಕಮ್ಮಂದಿರು ಅಸಲು ದಾವಾ ಸಂಃ 218/2013 ರಲ್ಲಿ ಆದ ಡಿಕ್ರಿಯನ್ನು ಉಲ್ಲಂಘನೆ ಮಾಡಿದ್ದಾರೆ ಎಂದು 2ನೇ ಆರೋಪಿ ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ ಅಮಲ್ಜಾರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಇರಬಹುದು. 2ನೇ ಆರೋಪಿ ತನ್ನ ಮಕ್ಕಳೊಂದಿಗೆ ಸದರಿ ಶೆಡ್ ನಲ್ಲಿ ವಾಸ ಇರುವುದು ನನಗೆ ಇಷ್ಟ ಇಲ್ಲ ಎಂದರೆ ಸರಿ. ಮೇಲೆ ಹೇಳಿದ ದಾವೆಯಲ್ಲಿ ಡಿಕ್ರಿಯಾದ ಜಾಗ 2ನೇ ಆರೋಪಿ ವಾಸವಿರುವ ಶೆಡ್ ನಮ್ಮ ಮನೆ ಮತ್ತು ಖಾಲಿ ಜಾಗ ಸೇರಿ 4032 ಚದರ ಅಡಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಶೆಡ್ಡನ್ನು ಈಗ ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. 2013 ರಲ್ಲಿ ಶೆಡ್ ಇರಲಿಲ್ಲ, ಆದರೆ 2ನೇ ಆರೋಪಿ ಮತ್ತು ಅವರ ಮಕ್ಕಳು ಮನೆಯಲ್ಲಿ ವಾಸವಿದ್ದರು. ಸದರಿ ಮನೆ 4032 ಚದರ ಅಡಿಯ ಒಳಗೆ ಇತ್ತು. 2ನೇ ಆರೋಪಿ ವಾಸವಿರುವ ಮನೆಯ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ರಸ್ತೆ ಮತ್ತು ವರ್ಕ್ ಶಾಪ್ ಇದೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನಮ್ಮ ಮನೆ ಇದೆ. ಅಸಲು ದಾವಾ ಸಂಃ 218/2013 ದಿಃ 19.11.2021 ರಂದು 2ನೇ ಆರೋಪಿಯ ಪರ ಡಿಕ್ರಿಯಾಯಿತು ಎಂದರೆ ಸರಿ. ದಿಃ 19.11.2021 ರಂದು ಡಿಕ್ರಿಯಾದಾಗಿನಿಂದ 01.09.2023 ರವರೆಗೂ ನಾನು, ನನ್ನ ತಾಯಿ ಮತ್ತು ಚಿಕ್ಕಮ್ಮಂದಿರು 2ನೇ ಆರೋಪಿ ಮತ್ತು ಅವರ ಮಕ್ಕಳು ವಾಸವಿರುವ ಮನೆಗೆ ಆಗಾಗ್ಗೆ ಹೋಗಿ ತೊಂದರೆ ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ 2ನೇ ಆರೋಪಿಯು ಮೇಲೆ ಹೇಳಿದ ದಾವೆಯಲ್ಲಿ ಆದ ಡಿಕ್ರಿ ಪ್ರತಿಯನ್ನು ನಮಗೆ ತೋರಿಸಿದ್ದಾರೆ ಎಂದರೆ ಇಲ್ಲ. ಆ ರೀತಿ ಡಿಕ್ರಿ ಪ್ರತಿಯನ್ನು ತೋರಿಸಿದಾಗ ನನ್ನ ತಾಯಿ ಮತ್ತು ಚಿಕ್ಕಮ್ಮಂದಿರು ಅದನ್ನು ಮುದುರಿ ಹಾಕಿದ್ದರಿಂದಲೇ ಅಮಲ್ಜಾರಿ ಅರ್ಜಿಯನ್ನು ದಾಖಲಿಸಲಾಗಿತ್ತು ಎಂದರೆ

ಸರಿಯಲ್ಲ. ಸದರಿ ಅಮಲ್ಜಾರಿ ಅರ್ಜಿಯಲ್ಲಿ ನನ್ನ ಚಿಕ್ಕಮ್ಮಂದಿರಿಗೆ ಸತತವಾಗಿ ನೋಟಿಸ್ ಜಾರಿ ಮಾಡಿದರೂ ಸಹ ಅದನ್ನು ಅವರು ಸ್ವೀಕರಿಸುತ್ತಿಲ್ಲ ಎಂದರೆ ಸ್ವೀಕರಿಸಿ ವಕೀಲರನ್ನು ನೇಮಿಸಿದ್ದಾರೆ.

ದಿಃ 01.09.2023 ರ ಸಮಯಕ್ಕೆ ದಾವೆಯ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿರಲಿಲ್ಲ ಎಂದರೆ ಸಲ್ಲಿಸಲಾಗಿತ್ತು. ಮೇಲ್ಮನವಿಯನ್ನು 2024 ರಲ್ಲಿ ಸಲ್ಲಿಸಲಾಗಿದೆ ಎಂದರೆ ಅಷ್ಟೊಂದು ಗೊತ್ತಿಲ್ಲ. ದಿಃ 01.09.2023 ರಂದು ಘಟನೆ ನಡೆಯುವ ಪೂರ್ವದಲ್ಲಿಯೇ 2ನೇ ಆರೋಪಿಯ ಪರವಾಗಿ ಡಿಕ್ರಿಯಾದ ಬಗ್ಗೆ ಕೋಪ ನನಗೆ ಇತ್ತು ಎಂದರೆ ಸರಿಯಲ್ಲ. ದಿಃ 01.09.2023 ಕ್ಕೂ ಪೂರ್ವದಲ್ಲಿಯೇ ಅಮಲ್ಜಾರಿ ಪ್ರಕರಣ ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ಡಿಕ್ರಿಯಾದಾಗಿನಿಂದ 2ನೇ ಆರೋಪಿ ನನ್ನ ತಾಯಿ ಮತ್ತು ಚಿಕ್ಕಮ್ಮಂದಿರ ಬಳಿ ಪಾಲು ಕೊಡಬೇಕೆಂದು ಕೇಳುತ್ತಿದ್ದರು ಎಂದರೆ ಇಲ್ಲ. 2ನೇ ಆರೋಪಿಯ ಮಕ್ಕಳು ಮತ್ತು ಅವರ ಬಾವಂದಿರ ಮಕ್ಕಳು ಪಾಲು ಕೇಳಿ ದಾವೆ ಸಲ್ಲಿಸಿದ್ದಾರೆ. ಸದರಿ ಪ್ರಕರಣ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಅದರ ಸಂಖ್ಯೆ ಅಸಲು ದಾವೆ 127/2023 ಎಂದರೆ ಗೊತ್ತಿಲ್ಲ. ಸದರಿ ದಾವೆಯನ್ನು ದಿಃ 01.09.2023 ಕ್ಕೂ ಪೂರ್ವದಲ್ಲಿಯೇ ದಾಖಲಿಸಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ದಿಃ 01.09.2023 ಕ್ಕೂ ಮೊದಲೇ ನನ್ನ ತಾಯಿ ಮತ್ತು ಚಿಕ್ಕಮ್ಮಂದಿರಿಗೆ ಸಮನ್ಸ್ ಜಾರಿಯಾಗಿತ್ತು. ಪಾಲು ಕೇಳಿ ದಾವೆ ಹಾಕಿದ್ದಾರೆ ಎಂಬ ಕೋಪ ನಮಗೆ ಇತ್ತು ಎಂದರೆ ಇಲ್ಲ.

ನಿಪಿ-1 ನ್ನು ಠಾಣೆಯಲ್ಲಿ ನಾನೇ ಬರೆದಿದ್ದೇನೆ. ದೂರಿನಲ್ಲಿ ಮೇಲೆ ಹೇಳಿದ ಮೇಲ್ಮನವಿ, ಪಾಲು ಕೋರಿ ಸಲ್ಲಿಸಿದ ದಾವೆ ಮತ್ತು ಅಮಲ್ಜಾರಿ ಅರ್ಜಿಯ ಬಗ್ಗೆ ನಾನು ಉಲ್ಲೇಖಿಸಿಲ್ಲ. ದಿಃ 02.09.2023 ರಂದು ಮಧ್ಯಾಹ್ನ 3-45 ಗಂಟೆಗೆ ನಿಪಿ-1 ರ ದೂರನ್ನು ಬರೆದಿದ್ದೇನೆ. ಒಂದು ದಿನ ತಡವಾಗಿ ದೂರು ನೀಡಲು ಕಾರಣವೇನೆಂದರೆ ಚಾಸಾ-2 ರವರನ್ನು ಮೈಸೂರಿಗೆ ಕರೆದುಕೊಂಡು ಹೋಗಿದ್ದೆ. ಅದನ್ನು ದೂರಿನಲ್ಲಿ ಕಾಣಿಸಿದ್ದಿರಾ ಎಂದರೆ ಇಲ್ಲ. ದೂರು ಕೊಡಲು ಹೋಗಿದ್ದ ಸಮಯ ಈಗ ನೆನಪಿಲ್ಲ. ನಾನು ದೂರು ಕೊಟ್ಟಿದ್ದೇನೆ ಎನ್ನುವ ಸಮಯದ ಪೂರ್ವದಲ್ಲಿ 2ನೇ ಆರೋಪಿ ನನ್ನ ಮತ್ತು ಉಳಿದ 5 ಜನರ ವಿರುದ್ಧ ದೂರು ನೀಡಿ ಸಿ.ಆರ್ ನಂಃ 184/2023 ದಾಖಲಾಗಿತ್ತು

ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ನಾವು 6 ಜನ ಸೇರಿ 2ನೇ ಆರೋಪಿ ಮತ್ತು ಅವರ ಮಗನ ಮೇಲೆ ಗುಂಪು ಕಟ್ಟಿಕೊಂಡು ಗಲಾಟೆ ಮಾಡಿ ತಳ್ಳಾಡಿ, 2ನೇ ಆರೋಪಿಯ ಮೈಮೇಲೆ ಕೈ ಹಾಕಿ ಎಳೆದಾಡಿದ್ದೇವೆ ಎಂದು ನೀಡಲಾಗಿತ್ತು ಎಂದರೆ ಸರಿಯಲ್ಲ. ನಮ್ಮನ್ನು ಪೋಲಿಸರು ಹುಡುಕಾಡುತ್ತಿದ್ದಾರೆ ಎಂಬ ಭಯ ನಮಗೆ ಇತ್ತು ಎಂದರೆ ಇಲ್ಲ. ಸದರಿ ಪ್ರಕರಣ ದಾಖಲಾಗಿದೆ ಎಂದು ಗೊತ್ತಾದ ನಂತರ ನಾವೆಲ್ಲರೂ ಒಟ್ಟಾಗಿ ಸಂಚು ನಡೆಸಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಗಲಾಟೆ ನಡೆಯಿತು ಎನ್ನುವ ನಿಖರವಾದ ಸ್ಥಳ ಯಾವುದು ಎಂದರೆ ನಾವು ಇರುವ ವಾಸವಾಗಿರುವ ಮನೆಯ ಜಾಗದಲ್ಲಿಯೇ ಆಗಿದೆ. ಗಲಾಟೆ ನಡೆಯಿತು ಎನ್ನುವ ಸ್ಥಳದ ಪೂರ್ವಕ್ಕೆ ಮನೆ. ಪಶ್ಚಿಮಕ್ಕೆ ರಸ್ತೆ ಮತ್ತು ವರ್ಕ್ ಶಾಪ್, ದಕ್ಷಿಣಕ್ಕೆ ನಾವು ವಾಸವಿರುವ ಮನೆ ಇದೆ, ಉತ್ತರಕ್ಕೆ ರಸ್ತೆ. ನಿಪಿ–2ರ ಮಹಜರಿನಲ್ಲಿ ಈಗ ಹೇಳಿದ ಚೆಕ್ಕುಬಂದಿ ಬರೆದಿದೆ.

ಘಟನೆ ನಡೆಯಿತು ಎನ್ನುವ ಸ್ಥಳದಿಂದ 2ನೇ ಆರೋಪಿ ವಾಸವಿರುವ ಮನೆ ಎಷ್ಟು ದೂರದಲ್ಲಿದೆ ಎಂದರೆ ಅದನ್ನು ಲೆಕ್ಕ ಹಾಕಲು ಆಗುವುದಿಲ್ಲ. ಮಹಜರಿನಲ್ಲಿ ಘಟನೆ ನಡೆಯಿತು ಎನ್ನುವ ಸ್ಥಳದಿಂದ ಎಷ್ಟು ದೂರದಲ್ಲಿ 2ನೇ ಆರೋಪಿಯ ಮನೆ ಇದೆ ಎಂದು ನಿಖರವಾಗಿ ಬರೆದಿದೆಯೇ ಇಲ್ಲವೇ ಎಂದರೆ ಗೊತ್ತಿಲ್ಲ. ಗಲಾಟೆ ನಡೆಯಿತು ಎನ್ನುವ ಸ್ಥಳದ ಅಳತೆ ಎಷ್ಟು ಎಂದರೆ ಅಳತೆ ಮಾಡಿಲ್ಲ. ಮಹಜರು ಸಮಯದಲ್ಲಿ ಘಟನೆ ನಡೆದಿದೆ ಎನ್ನುವ ಸ್ಥಳವನ್ನು ಗುರುತು ಮಾಡಿದ್ದಾರೆ. ಅದಕ್ಕೆ ಏನು ಚೆಕ್ಕು ಬಂದಿ ಹಾಕಿದ್ದಾರೆ ಎಂದರೆ ಮೇಲೆ ಹೇಳಿದ ಚೆಕ್ಕುಬಂದಿಯನ್ನು ಹಾಕಿದ್ದಾರೆ. ಘಟನೆ ನಡೆಯಿತು ಎನ್ನುವ 2 ದಿನದ ನಂತರ ಮಹಜರು ಮಾಡಿದ್ದಾರೆ. ಮಹಜರನ್ನು ಯಾರು ಬರೆದಿದ್ದಾರೆ ಮತ್ತು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಗೊತ್ತಿದೆ. ಬರೆದವರ ಹೆಸರು ಪೋಲಿಸರಾದ ಜಮೀರ್. ಮಹಜರಿಗೂ ಪೂರ್ವದಲ್ಲಿಯೇ ನಾನು ದೂರು ದಾಖಲಿಸಿದ್ದೇನೆ. ನಾನು ದೂರಿನಲ್ಲಿ ಹೇಳಿದ ನಿಖರವಾದ ಸ್ಥಳವನ್ನೇ ಮಹಜರಿನಲ್ಲಿ ತೋರಿಸಿದ್ದಾರೆ. ಮೊದಲಿಗೆ ಘಟನೆ ನಡೆಯಿತು ಎನ್ನುವ ಸಮಯದಲ್ಲಿ 2ನೇ ಆರೋಪಿ ಮತ್ತು ಅವರ ಮಗನನ್ನು ಕೋಪದಿಂದ ರೇಗಿಸಿ ಮಾತನಾಡಿಸಿದ್ದು ಯಾರು ಎಂದರೆ ನಾವು ಕೋಪದಿಂದ ರೇಗಿಸಿ ಮಾತನಾಡಿಲ್ಲ. ಶೆಡ್ಡನ್ನು ತೆಗೆಯಿರಿ ಎಂದು ಕೋಪದಿಂದ ಯಾರು ಹೇಳಿದ್ದು ಎಂದರೆ ಕೋಪದಿಂದ ಹೇಳಿಲ್ಲ. ಶೆಡ್ಡನ್ನು ತೆಗೆಯಿರಿ ಎಂದು ಹೇಳಿರುವುದೇ ದೂರು ಕೊಡಲು ಕಾರಣ ಎಂದರೆ

ಹೊಡೆದ ಕಾರಣ ದೂರು ಕೊಟ್ಟಿದ್ದೇನೆ. ಘರ್ಷಣೆ ಸುಮಾರು 2 ರಿಂದ 3 ಗಂಟೆಗಳ ಕಾಲ ನಡೆಯಿತು. 13 ಜನರ ಗುಂಪು ಘರ್ಷಣೆ 2 ರಿಂದ 3 ಗಂಟೆಗಳ ಕಾಲ ನಡೆಯಿತೇ ಎಂದರೆ ನಾವು 3 ಜನ ಮಾತ್ರ ಇದ್ದೆವು. ಸದರಿ ಘರ್ಷಣೆಯಲ್ಲಿ 2ನೇ ಆರೋಪಿಗೆ ಎಲ್ಲಿ ಪೆಟ್ಟಾಯಿತು ಎಂದರೆ ನಾವು ಆಕೆಗೆ ಹೊಡೆದಿಲ್ಲ. 1ನೇ ಆರೋಪಿಗೆ ಎಲ್ಲಿಗೆ ಪೆಟ್ಟಾಯಿತು ಎಂದರೆ ನಾವು ಅವರಿಗೆ ಹೊಡೆದಿಲ್ಲ. ಚಾಸಾ–2 ರವರು 2ನೇ ಆರೋಪಿಯ ದೇಹದ ಯಾವ ಭಾಗಕ್ಕೆ ಕೈ ಹಾಕಿದರು ಎಂದರೆ ಆ ರೀತಿ ಮಾಡಿಲ್ಲ. 2ನೇ ಆರೋಪಿ ನಮ್ಮ ವಿರುದ್ಧ ನೀಡಿದ ದೂರಿನಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡಿದ್ದೇನೆ. ಸದರಿ ಪ್ರಕರಣವನ್ನು 2ನೇ ಆರೋಪಿಯು ಚಾಸಾ–2 ರವರ ವಿರುದ್ಧ ಆಕೆಗೆ ಚೇಷ್ಟೆ ಮಾಡುತ್ತಾರೆ ಎಂದು ಹಾಗೂ ಕೆಟ್ಟ ದೃಷ್ಟಿಯಿಂದ ನೋಡುತ್ತಾರೆ ಎಂದು, ಹಿಂಬಾಲಿಸಿಕೊಂಡು ಕೀಟಲೆ ಮಾಡುತ್ತಾರೆ ಎಂದರೆ ಅವರು ದೂರು ನೀಡಿದಂತೆ ನಾವು ಏನು ಮಾಡಿಲ್ಲ.

2ನೇ ಆರೋಪಿಯ ಗಂಡ ತೀರಿಹೋಗಿ ಸುಮಾರು 15 ವರ್ಷವಾಯಿತೆ ಎಂದರೆ ಗೊತ್ತಿಲ್ಲ. ಚಾಸಾ–2 ರವರು ಸತತವಾಗಿ 2ನೇ ಆರೋಪಿಗೆ ಚೇಷ್ಟೆ ಮತ್ತು ಕೀಟಲೆ ಮಾಡುವ ಬಗ್ಗೆ ಸಾಕಷ್ಟು ಬಾರಿ ದೂರು ನೀಡಲಾಗಿದೆ ಎಂದರೆ ಇಲ್ಲ. ಶಾರದಾ ಎಂಬ ಮಹಿಳೆ ನೀಡಿದ ದೂರಿನ ಮೇಲೆ ಆಕೆಯ ಮೇಲೆ ದೈಹಿಕ ದೌರ್ಜನ್ಯ ನೀಡಿದ್ದಾನೆ ಎಂದು ಚಾಸಾ–2 ರವರ ವಿರುದ್ಧ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣ ನನ್ನ ತಮ್ಮನ ಪರವಾಗಿ ತೀರ್ಪಾಗಿದೆ. ನಮ್ಮಿಂದಾಗಿ 2ನೇ ಆರೋಪಿ ಮತ್ತು ಅವರ ಕುಟುಂಬದವರಿಗೆ ನೆಮ್ಮದಿ ಇಲ್ಲ ಎಂದರೆ ಸರಿಯಲ್ಲ. ನಮಗೆ ನೆಮ್ಮದಿ ಇಲ್ಲ. ನನ್ನ ವಿರುದ್ಧ ಹುಣಸೂರು ನ್ಯಾಯಾಲಯದಲ್ಲಿ ಈ ಪ್ರಕರಣ ಅಲ್ಲದೇ ಸಿವಿಲ್ ಪ್ರಕರಣಗಳು ಮತ್ತು ಚೆಕ್ ನ ಪ್ರಕರಣಗಳು ಇವೆ ಎಂದರೆ ಸರಿ. ಒಂದು ಚೆಕ್ ನ ಪ್ರಕರಣದಲ್ಲಿ ನನಗೆ ಶಿಕ್ಷೆಯಾಗಿದೆ ಎಂದರೆ ಮೇಲ್ಮನವಿ ಸಲ್ಲಿಸಿದ್ದೇನೆ. ಘಟನೆ ನಡೆಯಿತು ಎನ್ನುವ ಸಮಯದಲ್ಲಿ ಚಾಸಾ–2 ಬಿಳಿ ಶರ್ಟ್ ಮತ್ತು ಜೀನ್ಸ್ ಪ್ಯಾಂಟ್ ಧರಿಸಿದ್ದ. ಚಾಸಾ–2 ರವರಿಗೆ ಮೂಗಿನಿಂದ ಸುಮಾರು 15 ನಿಮಿಷ ರಕ್ತ ಸುರಿಯುತಿತ್ತು. ರಕ್ತ ಅವರ ಬಟ್ಟೆಗೆ ಆಗಿಲ್ಲ. ಕರವಸ್ತ್ರವನ್ನು ಇಟ್ಟುಕೊಂಡಿದ್ದ. ಸದರಿ ಕರವಸ್ತ್ರವನ್ನು ಪೋಲಿಸರಿಗೆ ಕೊಟ್ಟಿದ್ದಿರಾ ಎಂದರೆ ಇಲ್ಲ. ಚಾಸಾ–2 ರವರಿಗೆ ಮೂಗಿನಲ್ಲಿ ರಕ್ತ ಬರುತ್ತಿತ್ತು ಎಂದು ದೂರಿನಲ್ಲಿ ಹೇಳಿಲ್ಲ. ಮೂಗಿನಲ್ಲಿ ರಕ್ತ ಬರುತಿತ್ತು ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

ನಾನು ಆ ದಿನ ನೈಟಿ ಧರಿಸಿದ್ದೆ. ನನ್ನ ನೈಟಿ ನಡೆಯಿತು ಎನ್ನುವ ಘಟನೆಯಿಂದ ಹರಿದುಹೋಗಿಲ್ಲ. ಘಟನೆ ನಡೆಯಿತು ಎನ್ನುವ ಸ್ಥಳದ ಪೂರ್ವ ದಿಕ್ಕಿನಲ್ಲಿ ಆರೋಪಿತರಿದ್ದರು. ನಾವು 6 ಜನ ದಕ್ಷಿಣ ದಿಕ್ಕಿನಲ್ಲಿದ್ದೆವು. ಸಾಕ್ಷಿ ಮುಂದುವರಿದು 3 ಜನ ಇದ್ದೆವು ಎಂದು ನುಡಿಯುತ್ತಾರೆ. ನಮ್ಮಿಂದಾಗಿಯೇ ಘಟನೆ ನಡೆದಿದೆ ಎಂದರೆ ಸರಿಯಲ್ಲ. ಯಾಕೆ ಶೆಡ್ ಕಟ್ಟುತ್ತಿದ್ದಿರಾ ಎಂದು ಕೇಳದೇ ಹೋದರೆ ನಡೆಯಿತು ಎನ್ನುವ ಘಟನೆ ನಡೆಯುತ್ತಿರಲಿಲ್ಲ ಎಂದರೆ ನಾವು ಕೇಳದೇ ಇದ್ದರೇ ಅವರು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು ನಾವು ಮನೆಯಲ್ಲಿ ಉರ್ದು ಭಾಷೆ ಮಾತನಾಡುತ್ತೇವೆ. ನಾವೆಲ್ಲರೂ ಸೇರಿದಾಗ ಉರ್ದು ಭಾಷೆ ಮಾತನಾಡುತ್ತೇವೆ. ಉರ್ದು ಭಾಷೆಯಲ್ಲಿ ಯಾವ ನಿಖರವಾದ ಶಬ್ದಗಳನ್ನು ಬೈದರು ಎಂದರೆ ಆ ಶಬ್ದಗಳನ್ನು ಹೇಳಲು ಆಗುವುದಿಲ್ಲ. ಉರ್ದು ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈದರು ಎಂದು ದೂರಿನಲ್ಲಿ ಹೇಳಿದ್ದಿರಾ ಎಂದರೆ ಹೇಳಿದ್ದೇನೆ. ಸಾಕ್ಷಿ ಮುಂದುವರಿದು ಕನ್ನಡದಲ್ಲಿ ಹೇಳಿದ್ದೇನೆ ಎಂದು ನುಡಿಯುತ್ತಾರೆ. 3 ಜನ ಅವಾಚ್ಯ ಶಬ್ದಗಳಿಂದ ಬೈದರು. ಆ ಮೂರು ಜನರ ಹೆಸರನ್ನು ದೂರಿನಲ್ಲಿ ಹೇಳಿದ್ದೇನೆ. ಉರ್ದುವಿನಲ್ಲಿ ಕೊಲೆ ಬೆದರಿಕೆ ಹಾಕಿದ್ದಾರೆ. ದೂರಿನಲ್ಲಿ ಕನ್ನಡದಲ್ಲಿ ಬರೆದಿದ್ದೇನೆ. 1, 3 ಮತ್ತು 5ನೇ ಆರೋಪಿತರು ಉರ್ದು ಭಾಷೆಯಲ್ಲಿ ಕೊಲೆ ಬೆದರಿಕೆ ಹಾಕಿದರು. ಆ ಮೂರು ಜನರೇ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಹೇಳಿದ್ದೇನೆ. ಎಲ್ಲರೂ ಸೇರಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಹೇಳಿಲ್ಲ. 3 ಜನ ಕೊಲೆ ಬೆದರಿಕೆ ಹಾಕಿದ್ದಾರೆ ಮತ್ತು 3 ಜನ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 02.09.2023 ರಂದು ಒಂದೇ ದೂರು ನೀಡಿದ್ದೇನೆ. 3 ಜನ ಅವಾಚ್ಯ ಶಬ್ದಗಳಿಂದ ಬೈದ ಬಗ್ಗೆ ಬೇರೆ ದೂರು ಕೊಟ್ಟಿಲ್ಲ. ಒಂದೇ ದೂರು ಕೊಟ್ಟಿದ್ದೇನೆ. ನಿಪಿ–1ರ ದೂರು ಸುಳ್ಳು ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ ಸಾಮಾನ್ಯವಾಗಿ ಹೋಗುತ್ತೇನೆ ಎಂದರೆ ಇಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರು ಮತ್ತು ಮಹಜರಿಗೆ ಒಂದೊಂದು ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆ. ಇನ್ನೊಂದು ಸಹಿ ಮಾಡಿದ ಸಮಯ ಏನು ಎಂದರೆ 10 ರಿಂದ 11 ಗಂಟೆಗೆ ಸ್ಥಳದಲ್ಲಿ ಮಹಜರು ಮಾಡಿದಾಗ ಹಾಕಿದ್ದೇನೆ. ನಾನು ಠಾಣೆಯಲ್ಲಿ ದೂರು ಕೊಟ್ಟಾಗ ಮಾತ್ರ ಒಂದು ಸಹಿ ಹಾಕಿದ್ದೇನೆ. ಈ ಪ್ರಕರಣಕ್ಕೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ವಿರುದ್ಧ ದಾಖಲಾದ ಮೊಕದ್ದಮೆ ಸಂಃ

184/2023 ರಿಂದ ಮರೆಮಾಚುವ ಸಲುವಾಗಿ ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ದಿಃ 01.09.2023 ರಂದು ಮಧ್ಯಾಹ್ನ 3-45 ಗಂಟೆಗೆ ನಮ್ಮ ಮನೆಯ ಮುಂದೆ ಗಲಾಟೆ ನಡೆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 01.09.2023 ರಂದು ಮಧ್ಯಾಹ್ನ 3-45 ಗಂಟೆಗೆ ಆರೋಪಿತರು ನಾನು ಹೇಳಿದ ಜಾಗದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಚಾಸಾ-2 ರವರ ಜೊತೆ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೇನೆ. ಅಲ್ಲಿ ವೈದ್ಯರು ನನ್ನ ಬಳಿ ಘಟನೆಯ ಬಗ್ಗೆ ವಿಚಾರಣೆ ಮಾಡಿದರು. 3-45 ಕ್ಕೆ ಘಟನೆಯಾಗಿದೆ ಎಂದು ವೈದ್ಯರಿಗೆ ಹೇಳಿದ್ದೇನೆ. ವೈದ್ಯರ ಬಳಿ ಯಾರು ಗಲಾಟೆ ಮಾಡಿದರು ಎಂದು ನಿಖರವಾಗಿ ಹೇಳಿದ್ದಿರಾ ಎಂದರೆ ನೆನಪಿಲ್ಲ. ಯಾರೋ 6 ಜನ ಅಪರಿಚಿತ ವ್ಯಕ್ತಿಗಳು ಹಲ್ಲೆ ಮಾಡಿದ್ದಾರೆ ಎಂದು ನಾನಾಗಲೀ, ಚಾಸಾ-2 ಮತ್ತು 5 ರವರಾಗಲೀ ಹೇಳಿಲ್ಲ. ನಾನು ಹೇಳುತ್ತಿರುವ ಘಟನೆ ಕಟ್ಟು ಕಥೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.